



# ಕುರೂಪಕ್ಕೂ ಪುರಸ್ಕಾರ

ಸೌಂದರ್ಯ ಸ್ಪರ್ಧೆಗಳಿರುವಂತೆ ಕುರೂಪಕ್ಕೂ ಸ್ಪರ್ಧೆಗಳಿವೆ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಕೆಲವು ದಿನಗಳ ಹಿಂದೆ ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಜಾಗತಿಕ ಮಟ್ಟದ 'ಕುರೂಪಿ ನಾಯಿಗಳ ಸ್ಪರ್ಧೆ' ನಡೆಯಿತು. ಅದರಲ್ಲಿ ಚೀನಾದ ಯೋದಾ ಎಂಬ ಈ ನಾಯಿ ಪ್ರಥಮ ಪ್ರಶಸ್ತಿ ಪಡೆಯಿತು. ಅದರ ಮೈಮೇಲಿರುವ ಹುಲ್ಲಿನ ಪೊದೆಯಂತಹ ಕೂದಲು, ಅಸಹ್ಯವಾಗಿ ಹೊರಚಾಚಿದ ನಾಲಿಗೆ, ರೋಮರಹಿತ ಉದ್ದನೆಯ ಕಾಲುಗಳಿಂದಾಗಿ ಈ ಕುಳ್ಳ ನಾಯಿ 'ವಿಶ್ವದ ಅತ್ಯಂತ ಕುರೂಪಿ ನಾಯಿ' ಎಂಬ (ಅಪ)ಕೀರ್ತಿಯನ್ನು ಪಡೆದುಕೊಂಡಿತು. ನಿರ್ಣಯ ಹೊರಗೆ ಬಿದ್ದ ಕೂಡಲೇ ಅದರ ಯಜಮಾನಿ ನಿಕೋಲ್ ಶೂಮೇಕರ್ ತನ್ನ ಕುರೂಪಿ ನಾಯಿಯನ್ನು ಹಲವು ಬಾರಿ ಚುಂಬಿಸಿ ಬಿಟ್ಟಳು. ಥೂ ಅಸಹ್ಯ.. ಎನ್ನಬೇಡಿ. ಅವಳಿಗೆ ಅದರ ಕುರೂಪವೇ ಸುರೂಪ!

14 ವರ್ಷದ ಚೀನಾ ದೇಶದ ಹಳೆಯ ತಳಿಯ ಈ ನಾಯಿ ತನ್ನೊಂದಿಗೆ ಸ್ಪರ್ಧೆಗಿಳಿದ ಇತರ ಕುರೂಪಿ ನಾಯಿಗಳನ್ನು ಹಿಂದಿಕ್ಕಿ ಏದುಸಿರು ಬಿಡುತ್ತಿತ್ತಂತೆ. ಇದೇನು ಓಡಿರಲಿಲ್ಲ.. ಕೆಲವು ಹೆಜ್ಜೆ ನಡೆದಿರಲೂ ಇಲ್ಲ! ತನ್ನ ಯಜಮಾನಿಯ ಮೃದು ಕೈಗಳಲ್ಲಿ ಕುಳಿತು ನಿರ್ಣಾಯಕರಿಗೆ ಮುಖ ತೋರಿಸಿದ್ದಷ್ಟೇ! ಅಷ್ಟಕ್ಕೇ ಇದು ಹೈರಾಣಾಗಿತ್ತು.

ಈ ಸ್ಪರ್ಧೆಯ ಇನ್ನೊಂದು ವಿಶೇಷವೆಂದರೆ, ಇಲ್ಲಿ ತಮ್ಮ ಕುರೂಪಿ ನಾಯಿಗಳನ್ನು ತಂದ ಅವುಗಳ ಮಾಲಿಕರು ಒಬ್ಬರಿಗಿಂತ ಒಬ್ಬರು ಸುಂದರಿಯರಾಗಿದ್ದರು. ಆಯೋಜಕರು ನಾಯಿಗಳ ಒಡತಿಯರಿಗೆ ಸೌಂದರ್ಯ ಸ್ಪರ್ಧೆಯನ್ನೂ ಅಲ್ಲೇ ಏರ್ಪಡಿಸಬಹುದಿತ್ತು! ಅಂದ ಹಾಗೆ, ಈ ಕುರೂಪಿ ನಾಯಿಗಳ ಸ್ಪರ್ಧೆ ಕೆಲವು ವರ್ಷಗಳಿಂದ ನಡೆಯುತ್ತಿದೆ. ಈ ಸಲವಷ್ಟೇ ದೊಡ್ಡ ಸುದ್ದಿಯಾಗಿದೆ.



■ ಸುಭಾಸ ಯಾದವಾಡ